# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 21/2019

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀಮತಿ ಕೃತಿಕಾ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ | ಶ್ರೀ ಸತ್ಯವೇಲು | 06.12.2024 | |
| ವಯಸ್ಸು | ಃ | 46 ವರ್ಷ | | |
| ವೃತ್ತಿ | ಃ | ಸಹಾಯಕ ನಿರ್ದೇಶಕರು,<br>ಆರ್.ಎಫ್.ಎಸ್.ಎಲ್ ಮೈಸೂರು | ಪ್ರಾ.ಸಾ. ಃ | 18 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ | 25 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2011* ರಿಂದ ಈ ತನಕ ಆರ್.ಎಫ್.ಎಸ್.ಎಲ್ ಮೈಸೂರಿನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಆ ಕಾಲಕ್ಕೆ ದಿಃ *07.07.2015* ರಂದು ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಎ.ಸಿ.ಪಿ ಎನ್.ಆರ್ ವಿಭಾಗದ ಕೋರಿಕೆ ಪತ್ರದೊಂದಿಗೆ ಮಂಡಿ ಪೋಲೀಸ್ ಠಾಣೆಯ ಪೇದೆ-*139* ರತನ್ ಕುಮಾರ್ ಇವರು ಮೊ.ಸಂಖ್ಯೆ *95/2015* ಪ್ರಕಣಕ್ಕೆ ಸಂಬಂದಪಟ್ಟ *4* ಸೀಲಾದ ವಸ್ತುಗಳನ್ನು ನಮ್ಮ ಕಛೇರಿಗೆ ವಿಶ್ಲೇಷಣೆಗೆ ತಂದು ಕೊಟ್ಟಿದ್ದರು. ಆ ವಸ್ತುಗಳನ್ನು ನಮ್ಮ ಸ್ವಾಗತಾ ವಿಭಾಗದವರು ಸ್ವೀಕರಿಸಿ ಟಿ.ಎಸ್ *1236/2015* ರಂತೆ ಸಂಖ್ಯೆ ನೀಡಿ ವಿಷವಿಜ್ಞಾನ ವಿಭಾಗಕ್ಕೆ ಕಳುಹಿಸಿದ್ದರು. ಆ ಕಾಲಕ್ಕೆ ಆ ವಸ್ತುಗಳನ್ನು ವಿಶ್ಲೇಷಣೆಗಾಗಿ ನನಗೆ ಕೊಟ್ಟಿದ್ದರು. ಪರೀಕ್ಷೆಗಾಗಿ ಸದರಿ ವಸ್ತುಗಳನ್ನು ತೆಗೆದು ನೋಡಿದಾಗ ಅವುಗಳ ಮೇಲೆ ಇದ್ದ ಸೀಲುಗಳು ಸುಸ್ಥಿತಿಯಲ್ಲಿದ್ದು ಮತ್ತು ಮಾದರಿ ಸೀಲಿನೊಂದಿಗೆ ಹೊಲಿಯಾಗುತ್ತಿತ್ತು. ಅವುಗಳನ್ನು ಬಿಚ್ಚಿ ನೋಡಿದಾಗ ಅವುಗಳಲ್ಲಿ ಈ ಕೆಳಕಂಡ ವಸ್ತುಗಳು ಇದ್ದವು

*1.* ಜಠರ ಮತ್ತು ಅದರ ಅಡಕಗಳು ಹಾಗೂ ಸಣ್ಣ ಕರುಳಿನ ಭಾಗಗಳು
*2.* ಲಿವರ್ ಮತ್ತು ಕಿಡ್ನಿ ಭಾಗಗಳು
*3.* ರಕ್ತ
*4.* ಉಪ್ಪಿನ ದ್ರಾವಣ

ಕ್ರಮ ಸಂಖ್ಯೆ *1* ರಿಂದ *3* ರಲ್ಲಿನ ವಸ್ತುಗಳು ಪವಿತ್ರ ಕುಮಾರಿ ಎನ್ನುವವರಿಗೆ ಸಂಬದಪಟ್ಟಿದ್ದು ಎಂದು ವೈದ್ಯರು ಮತ್ತು ಪೊಲೀಸರು ಬರೆದು ಕಳುಹಿಸಿದ್ದರು. ಆ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದೆ ಆ ಕಾಲಕ್ಕೆ ಕ್ರಮ ಸಂಖ್ಯೆ *1* ರಿಂದ *3* ರಲ್ಲಿ organophosporous insecticid***e*** ಎನ್ನುವ ಕ್ರಿಮಿನಾಶಕ ಕಂಡುಬಂದಿತ್ತು. ವಸ್ತು ಸಂಖ್ಯೆ *4* ರಲ್ಲಿ ಯಾವುದೇ ವಿಷದ ಅಂಶ ಕಂಡುಂದಿರಲಿಲ್ಲ. ಈ ಕುರಿತು ನಾನು ವರದಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ–*32* ಮತ್ತು ಸಹಿಯನ್ನು ನಿ.ಪಿ–*32(*ಎ*)* ಎಂದು ಗುರುತಿಸಿದೆ. ಪರೀಕ್ಷೆ ಬಳಿಕ ಆ ಎಲ್ಲಾ ವಸ್ತುಗಳನ್ನು ನಿಯಾಮಾನುಸಾರ ನಾಶಪಡಿಸಿದ್ದೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದ:-**

2. ಈ ಮೇಲೆ ಹೇಳಿದ ಕ್ರಮ ಸಂಖ್ಯೆ *1* ರಿಂದ *3* ವಸ್ತುಗಳನ್ನು ಶವ ಪರೀಕ್ಷೆ ಬಳಿಕ ನಮ್ಮ ಕಛೇರಿಗೆ ಕಳುಹಿಸಿದ್ದಾರೆ. ಆ ವಸ್ತುಗಳನ್ನು ತೂಕ ಮಾಡಿ ನೋಡಿಲ್ಲ. ಆ ವಸ್ತುಗಳು ಅಂದಾಜು ಒಂದೊಂದು *200* ಗ್ರಾಂ ಇದ್ದಿರಬಹುದು. ಆ ವಸ್ತುಗಳನ್ನು ಮೊದಲಿಗೆ GCFID Method ನಲ್ಲಿ ಮದ್ಯಸಾರ ಇದೆಯೋ ಇಲ್ಲವೊ ಎಂದು ತಪಾಸಣೆ ಮಾಡಿ ನಂತರ Thin Layer Chromatography Method ನಲ್ಲಿ ವಿಷದ ಅಂಶ ಇದೆಯೋ ಇಲ್ಲವೊ ಎಂದು ತಪಾಸಣೆ ಮಾಡಿದ್ದೇನೆ. ಆ ವಸ್ತುಗಳನ್ನು ತಪಾಸಣೆ ಮಾಡಲು ಉಪಯೋಗ ಮಾಡಿದ instruments ಗಳ ಬಗ್ಗೆ ವರದಿಯಲ್ಲಿ ನಮೂದು ಇಲ್ಲ ಆದರೆ ಆ ಬಗ್ಗೆ ಅವಶ್ಯಕತೆ ಇದ್ದರೆ ಹೇಳುತ್ತೇನೆ. organophosporous insecticide ಕೆಮಿಕಲ್ ನ *150* ಗುಂಪುಗಳಿದ್ದು ಆ ಮಹಿಳೆ ಸೇವಿಸ್ಧಿ ವಿಷ ಯಾವ ಗುಂಪಿನದ್ದು ಎಂದು

ನಿಖರವಾಗಿ ಗೊತ್ತಾಗದೇ ಇದುದ್ದರಿಂದ ಆ ಮಹಿಳೆ ದೇಹದಲ್ಲಿದ್ದ ವಿಷ ಎಷ್ಟು ಪ್ರಮಾಣದಲ್ಲಿತ್ತು ಎಂದು ಹೇಳಲು ಆಗುವುದಿಲ್ಲ. ಸ್ವಲ್ಪ ಪ್ರಮಾಣದ insecticide ಸೇವಿಸಿದಲ್ಲಿ ಸಾವು ಸಂಭವಿಸುವುದಿಲ್ಲ ಎಂದರೆ ನಿಜ. ಆ ವಸ್ತುಗಳನ್ನು ತಪಾಸಣೆ ಮಾಡುವಾಗ ನಾನು ಶವ ಪರೀಕ್ಷೆ ವರದಿ ನೋಡಿದ್ದೇನೆ. ವರದಿಯನ್ನು ನಮ್ಮ ಕಛೇರಿಯಿಂದ ನೇರವಾಗಿ ತನಿಖಾಧಿಕಾರಿಗೆ ಕೊಡುತ್ತಾರೆ. ಆ ವಸ್ತುಗಳನ್ನು ತಪಾಸಣೆ ಮಾಡುವ ಮೊದಲು ನನಗೆ ಆ ಮಹಿಳೆ ವಿಷ ಸೇವನೆ ಮಾಡಿದ ಬಗ್ಗೆ ಖಚಿತ ಮಾಹಿತಿ ಇರಲಿಲ್ಲ. ವೈದ್ಯರು ರೋಗಿಯ condition ಆಧಾರದ ಮೇಲೆ ಅವರು ಯಾವ ರೀತಿಯ ವಿಷ ಅಥವಾ ಔಷಧಿ ಸೇವಿಸಿರಬಹುದು ಎಂದು ಅಂದಾಜು ಮಾಡುತ್ತಾರೆ. ರೋಗಿ ಸೇವಿಸಿದ ವಿಷ ಅಥವಾ ಔಷಧಿ ಬಾಟಲ್ ಅನ್ನು ವೈದ್ಯರು ನೋಡಿದಲ್ಲಿ ಆ ರೋಗಿಗೆ ಬಹಳ ಬೇಗ ಮತ್ತು ಸೂಕ್ತ ಚಿಕಿತ್ಸೆ ಕೊಡಬಹುದು ಎಂದರೆ ನಿಜ. ರಾಸಾಯನಿಕ ಪರೀಕ್ಷೆಗೆ ಆ ವಿಷದ ಬಾಟಲ್ ನ ಅವಶ್ಯಕತೆ ಇಲ್ಲ. ನಾನು ಸರಿಯಾದ ಕ್ರಮದಿಂದ ಆ ವಸ್ತುಗಳ ತಪಾಸಣೆ ಮಾಡಿಲ್ಲ ಆದ್ದರಿಂದ ಅವುಗಳಲ್ಲಿ ವಿಷದ ಪ್ರಮಾಣ ಎಷ್ಟಿತ್ತು ಎಂದು ಹೇಳಲು ಆಗಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಆ ಮಹಿಳೆಯ ಸಾವು ಆ ವಿಷದಿಂದ ಆಗಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು